ಅಸಲು ದಾವಾ ನಂ.272/2022
ಪಿ ಡಬ್ಲ್ಯು-1

ದಿನಾಂಕಃ 23-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ. ಎಸ್ ಜಿ ಹೆಚ್ ವಕೀಲರಿಂದ.

ತಿರಕಪ್ಪ ಇವರು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಆದ ಡ ನಂಬರುಗಳನ್ನು ಪ್ರಶ್ನಿಸಿಲ್ಲ. ತಿರಕಪ್ಪ ತೀರಿಕೊಂಡ ನಂತರ ನಾವು ಸಹ ಸದರಿ ಡ ನಂಬರುಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಾನು ತಹಶೀಲ್ದಾರ ಹಾಗೂ ಉಪವಿಭಾಗಾಧಿಕಾರಿಯವರಲ್ಲಿ ಪ್ರಶ್ನೆ ಮಾಡಿರುತ್ತೇನೆ. ದಾವಾ ಆಸ್ತಿ-ಅ ಗೆ ಸಂಬಂಧಿಸಿದ ಮಾಲೀಕರಾದ ಕರಿಯಪ್ಪ ತಂದೆ ಮಾಯಪ್ಪ ಮಾದರ ಇವರು ದಿನಾಂಕ 28-01-1994 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಕರಿಯಪ್ಪನಿಗೆ ಪ್ರತಿವಾದಿ ನಂ.10 ರಿಂದ 14 ವಾರಸುದಾರರು ಎಂದರೆ ಸರಿಯಲ್ಲ. ದಾವಾ ಆಸ್ತಿ-ಅ-1 ಸಂಬಂಧಿಸಿದಂತೆ ಕರಿಯಪ್ಪ ಈತನ ಮರಣಾನಂತರ ಪ್ರತಿವಾದಿ ನಂ.10 ರಿಂದ 14 ಇವರ ಹೆಸರುಗಳು ಡ ನಂಬರ 2082 ರ ಪ್ರಕಾರ 1996 ರಲ್ಲಿಯೇ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಸಾಮೂಹಿಕ ಮಾಲೀಕರಾದ ದುರ್ಗಪ್ಪ ಇವರು ದಿನಾಂಕ 30-06-2006 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದುರ್ಗಪ್ಪ ಇವರಿಗೆ ಪ್ರತಿವಾದಿ ನಂ.1 ರಿಂದ 9 ಸರಳ ವಾರಸುದಾರರು ಎಂದರೆ ಸರಿಯಲ್ಲ. ಅವರ ಹೆಸರುಗಳು ಎಮ್ ಆರ್ ಹೆಚ್-5/2015-16 ರ ಪ್ರಕಾರ ನೋಂದಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿ ಅ-1 ಕ್ಕೆ ಪ್ರತಿವಾದಿ ನಂ.1 ರಿಂದ 14 ಮಾಲೀಕರು ಎಂದರೆ ಸರಿಯಲ್ಲ. ಸದರಿ ಆಸ್ತಿಯು ಇಲ್ಲಿಯವರೆಗೂ ಪ್ರತಿವಾದಿ ನಂ.1 ರಿಂದ 14 ಇವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ-ಅ-2 ಇದರ ಮಾಲೀಕರಾದ ತಿರಕಪ್ಪ ತೀರಿಕೊಂಡ ನಂತರ ನಾವುಗಳು ಸದರಿ ಆಸ್ತಿಯ ಮಾಲೀಕರಾಗಿರುತ್ತೇವೆ ಎಂದರೆ ಸರಿಯಲ್ಲ. ರಿ.ಸ.ನಂ.32/3 ಬ ಆಸ್ತಿಯನ್ನು ನಾನು ಮತ್ತು ನೀಲವ್ವಳ ವಾರಸುದಾರರು ಸ್ವಾಧೀನದಲ್ಲಿ ಇಟ್ಟುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾನು, ಪ್ರತಿವಾದಿ ನಂ.15, 16 ಸ್ವಾಧೀನದಲ್ಲಿ ಇಟ್ಟುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.17, 18 ನನ್ನ ಜನಕ ತಂದೆಯ ವಾರಸುದಾರರು ಇರುವುದರಿಂದ ಅವರು ಈ ಆಸ್ತಿಗೆ ಏನು ಹಕ್ಕುದಾರರು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಹೊರತುಪಡಿಸಿ ಸರ್ವೇ ನಂ.42/5 ಕ್ಷೇತ್ರ 16 ಗುಂಟೆ ಹಾಗೂ ಸರ್ವೇ ನಂ.42/15 ಕ್ಷೇತ್ರ 29 ಗುಂಟೆ ನಮ್ಮ ಮನೆತನದ ಆಸ್ತಿ ಎಂದರೆ ಸರಿ. ಸದರಿ ಆಸ್ತಿಗಳು ಈ ಹಿಂದೆ ತಿರಕಪ್ಪ, ದ್ಯಾಮಣ್ಣ ಮತ್ತು ಮಾಯಪ್ಪ ಇವರ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಫಕ್ಕೀರಪ್ಪ ಮತ್ತು ಮಾಯಪ್ಪ ಇವರ ಹಿಸ್ಸೇಗಳಿಗೆ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ನಮ್ಮ ಮನೆತನದಲ್ಲಿ ಫಕ್ಕೀರಪ್ಪ ಮಾಯಪ್ಪ ಮಾದರ ಮತ್ತು ಮಾಯಪ್ಪ ತಂದೆ ಮಾಯಪ್ಪ ಮಾದರ ಎಂಬುವವರು ಯಾರು ಇರಲಿಲ್ಲ. ಸರ್ವೇ ನಂ.42 ಕ್ಕೆ ನನ್ನ ಹೆಸರು ನಮೂದು ಆಗುವ ಪೂರ್ವದಲ್ಲಿ ಅದು ತಿರಕಪ್ಪ ಇವರ ಹೆಸರಿನಲ್ಲಿ ಇತ್ತು. ಹಾಗೇ ಸದರಿ ಆಸ್ತಿಯು ತಿರಕಪ್ಪ ಇವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಈ ದಾವೆಯಲ್ಲಿ ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ನಾನು ಸದರಿ ಆಸ್ತಿಗೆ 2000 ನೇ ಇಸವಿಯಲ್ಲಿ ನನ್ನ ಹೆಸರು ಹಚ್ಚಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ 1975 ರಲ್ಲಿಯೇ ನನ್ನ ಹೆಸರು ಹಚ್ಚಿ ರುವುದಾಗಿ ನುಡಿಯುತ್ತಾರೆ. ಹಾಗೇ 1975 ರಲ್ಲಿ ನಾನು ಹೆಸರು ಹಚ್ಚಿ ಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿನಾಂಕ 24-07-2000 ರಂದು ನನ್ನ ಹೆಸರನ್ನು ಹಚ್ಚಿಕೊಳ್ಳುವಾಗ ಫಕ್ಕೀರಪ್ಪ ಬಿನ್ ಮಾಯಪ್ಪ, ಮಾಯಪ್ಪ ಬಿನ್ ಮಾಯಪ್ಪ ಎಂಬುವವರು ಒಬ್ಬರೇ ಇದ್ದು ಎಂದು ಹೇಳಿ ಹೆಸರು ಹಚ್ಚಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹಾಗೇ ಡ ನಂಬರ 2244 ಮಂಜೂರು ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಫಕ್ಕೀರಪ್ಪ ಬಿನ್ ಮಾಯಪ್ಪ ಹಾಗೂ ಮಾಯಪ್ಪ ಬಿನ್ ಮಾಯಪ್ಪ ಎಂಬುವವರ ಹೆಸರು ಆಸ್ತಿಯಲ್ಲಿ ನಮೂದು ಇದ್ದು ಮಾಯಪ್ಪ ಬಿನ್ ಮಾಯಪ್ಪ ಇವರು ದಿನಾಂಕ 20-06-1919 ರಂದು ತೀರಿಕೊಂಡಿರುವುದಾಗಿ ಹೇಳಲಾಗಿರುತ್ತದೆ ಎಂದರೆ ಸರಿಯಲ್ಲ. ಫಕ್ಕೀರಪ್ಪ ಬಿನ್ ಮಾಯಪ್ಪ ಮತ್ತು ಮಾಯಪ್ಪ ಬಿನ್ ಮಾಯಪ್ಪ ಇವರಿಗೆ ಯಾರು ವಾರಸುದಾರರು ಇರುವುದಿಲ್ಲ, ನಾನು ತಿರಕಪ್ಪ ಇವರ ದತ್ತಕ ಪುತ್ರ ಇರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. 2001 ನೇ ಇಸವಿಯಲ್ಲಿ ಡ ನಂಬರ 2273 ರ ಪ್ರಕಾರ ಫಕ್ಕೀರಪ್ಪ ಮತ್ತು ಮಾಯಪ್ಪ ಒಬ್ಬನೇ ಎಂದು ಹೇಳಿ ನನ್ನ ಮತ್ತು ದುರ್ಗವ್ವ ಇವರ ಹೆಸರುಗಳನ್ನು ಹಚ್ಚಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಫಕ್ಕೀರಪ್ಪ ಈತನ ವಾರಸುದಾರರಿಗೆ ಅರ್ಧ ಹಿಸ್ಸೇ ಇದ್ದರೂ ಸಹ ನಾನು ಎಲ್ಲಾ ಆಸ್ತಿಯನ್ನು ಪಡೆದುಕೊಳ್ಳುವ ಸಲುವಾಗಿ ಈ

ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತಾನು ತಿರಕಪ್ಪನಿಗೆ ದತ್ತಕ ಹೋಗಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಗೆ ತಿರಕಪ್ಪ ಒಬ್ಬನೇ ಮಾಲೀಕನು ಎಂದು ತೋರಿಸಲು ಈ ದಾವೆಯಲ್ಲಿ ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ನಮ್ಮ ಘರಾಣೇಯಲ್ಲಿ ಫಕ್ಕೀರಪ್ಪ ಮತ್ತು ಮಾಯಪ್ಪ ಎಂಬ ಬೇರೆ ಬೇರೆ ವ್ಯಕ್ತಿಗಳು ಇದ್ದರೂ ಸಹ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಫಕ್ಕೀರಪ್ಪ ಮತ್ತು ಮಾಯಪ್ಪ ಇವರ ವಂಶಾವಳಿಯನ್ನು ಖೊಟ್ಟಿಯಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಘರಾಣೇದಲ್ಲಿ ದ್ಯಾಮಣ್ಣ ಫಕ್ಕೀರಪ್ಪ ಮಾದರ ಎಂಬುವವರು ಇದ್ದರು, ಅವರು ಈಗ ತೀರಿಕೊಂಡಿರುತ್ತಾರೆ. ಸಾಕ್ಷಿ ಅವರು ತಿರಕಪ್ಪನ ದೊಡ್ಡಪ್ಪ ಎಂದು ನುಡಿಯುತ್ತಾರೆ. ಅವರು ತಿರಕಪ್ಪನ ತಂದೆಯ ಅಣ್ಣ ಇರುತ್ತಾರೆ. ಹಾಗೇ ಅವರು ತಿರಕಪ್ಪನ ತಂದೆಯ ಅಣ್ಣ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).